ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

**ಸಿ.ಸಿ. 67/2018**

ಪಿರ್ಯಾದುದಾರರು : ಸರ್ಕಾರದ ಪರವಾಗಿ ರೈಲ್ವೆ ಪೊಲೀಸರಿಂದ

-ವಿರುದ್ದ-

ಆರೋಪಿತರು : ಕೃಷ್ಣಪ್ಪ ಜಿ.

**-:ದೋಷಾರೋಪಣೆ:-**

**ಶ್ರೀ ರಘುರಾಮ ಎನ್.ಎಸ್.,** ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವ:

ಕೃಷ್ಣಪ್ಪ ಜಿ. ಬಿನ್ ಗೋಪಾಲಯ್ಯ, ಸುಮಾರು 62 ವರ್ಷ, ವ್ಯಾಪಾರ, ವಾಸ : ಆದರ್ಶ ನಿವಾಸ, ಛತ್ರದ ಬೀದಿ, ಕಡೂರು.

ಆದ ನಿಮ್ಮವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆ:

ದಿನಾಂಕ: 05.10.2017 ರಾತ್ರಿ 7-45 ರ ಸಮಯದಲ್ಲಿ ಕಡೂರು ರೈಲು ನಿಲ್ದಾಣದ ವೇದಿಕೆ ನಂಬರ್ 02 ರ ಉತ್ತರ ಭಾಗದಲ್ಲಿ ಚಾಸಾ-1 ಶಿವಶಂಕರರವರು ಚಾಸಾ-4 ಮತ್ತು 5 ರವರೊಂದಿಗೆ ಯಶವಂತಪುರ-ಚಿಕ್ಕಮಗಳೂರು ಪ್ಯಾಸೆಂಜರ್ ರೈಲು ಗಾಡಿಯಲ್ಲಿ ಬರುವ ತನ್ನ ಸ್ನೇಹಿತನಿಗೆ ಕಾಯುತ್ತಿರುವಾಗ, ಆರೋಪಿಯಾದ ನೀವು ಚಾಸಾ-1 ರವರಿಗೆ ಡಿಕ್ಕಿ ಹೊಡೆದ ಕಾರಣ, ಆ ಕುರಿತು ಚಾಸಾ-1 ರವರು ಪ್ರಶ್ನೆ ಮಾಡಿದ್ದಕ್ಕೆ, ಆರೋಪಿಯು ಛತ್ರಿಯಿಂದ ಚಾಸಾ-1 ರವರ ಎಡಕಣ್ಣಿನ ಪಕ್ಕಕ್ಕೆ ತಿವಿದು ಚುಚ್ಚಿ, ವೇದಿಕೆಯಿಂದ ಕೆಳಗೆ ಜಿಗಿದು ರೈಲು ಹಳಿಗಳ ಪಕ್ಕದಲ್ಲಿದ್ದ ಜಲ್ಲಿ ಕಲ್ಲಿನಿಂದ ಬೀಸಿ ಹೊಡೆದು ಚಾಸಾ-1 ರವರ ಬಲಗೈ ಹೆಬ್ಬೆರಳಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 326 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಚಾಸಾ-1 ರವರಿಗೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 18.04.2022

18.04.2022

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

**ಸಿ.ಸಿ. 67/2018**

ಆರೋಪಿ ಸಂಖ್ಯೆ :

ಆಪಾದಿತರ ಹೆಸರು : ಕೃಷ್ಣಪ್ಪ
ತಂದೆಯ ಹೆಸರು : ಗೋಪಾಲಯ್ಯ
ವಯಸ್ಸು : 62
ಉದ್ಯೋಗ : ವ್ಯಾಪಾರ
ವಾಸಸ್ಥಳ : ಕಡೂರು ಟೌನ್.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಹೌದು

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ಒಪ್ಪುವುದಿಲ್ಲ, ವಿಚಾರಣೆಯಾಗಬೇಕು

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ 18.04.22 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

[signature] 18.04.2022

ಪ್ರಧಾನ ಪ್ರಃದಃನ್ಯಾಃದಂಃಕಡೂರು.

G. Ki... [signature]